ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2014–15 ದಿನಾಂಕ: 15–7–2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | ಪತ್ರಿಕಾಗೋಷ್ಠಿ:<br>ಡಾ: ಕೃಪಾ ಅಮರ್ ಆಳ್ವ<br>ಅಧ್ಯಕ್ಷರು, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ | 16–07–2015<br>ಗುರುವಾರ<br>ಬೆಳಿಗ್ಗೆ | ಬೆಂಗಳೂರು |
| 2 | ಕರ್ನಾಟಕ ಪ್ರವಾಸೋದ್ಯಮ ನೀತಿ 2015 – 2020 ರ ಬಿಡುಗಡೆ ಮತ್ತು ಪ್ರವಾಸಿ ತಾಣಗಳನ್ನು ದತ್ತು ತೆಗೆದುಕೊಳ್ಳಲು ಕಾರ್ಪೋರೇಟ್ ಸಂಸ್ಥೆಗಳೊಂದಿಗೆ ಒಡಂಬಡಿಕೆ ಕಾರ್ಯಕ್ರಮ:<br><u>ಉದ್ಘಾಟನೆ:</u><br>ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು<br><u>ಅಧ್ಯಕ್ಷತೆ:</u><br>ಆರ್. ವಿ. ದೇಶಪಾಂಡೆ,<br>ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು.<br><u>ಮುಖ್ಯ ಅತಿಥಿಗಳು:</u><br>ಬಿ. ರಮಾನಾಥ ರೈ,<br>ಅರಣ್ಯ ಸಚಿವರು. | 16–07–2015<br>ಗುರುವಾರ<br>ಸಂಜೆ<br>6–30 ಗಂಟೆಗೆ | ಹೋಟೆಲ್ ಐ.ಟಿ.ಸಿ. ಗಾರ್ಡೇನೀಯಾ, ಬೆಂಗಳೂರು. |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

***ವಿಧಾನ ಮಂಡಲದಲ್ಲಿ ಇಂದು:***

## ರಾಜ್ಯದಲ್ಲಿ 7.99 ಲಕ್ಷ ವಿಕಲಚೇತನರಿಗೆ ಮಾಸಾಶನ

ಬೆಂಗಳೂರು, ಜುಲೈ 15 (ಕರ್ನಾಟಕ ವಾರ್ತೆ)

ರಾಜ್ಯದಲ್ಲಿ ಒಟ್ಟು 7,99,191 ವಿಕಲಚೇತನರು ಮಾಸಾಶನ ಪಡೆಯುತ್ತಿದ್ದಾರೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಖಾತೆ ರಾಜ್ಯ ಸಚಿವರಾದ ಶ್ರೀಮತಿ ಉಮಾಶ್ರೀ ಅವರು ಇಂದು ವಿಧಾನಸಭೆಯಲ್ಲಿ ಡಾ. ಎಸ್. ರಫೀಕ್ ಅಹ್ಮದ್ ಅವರಿಗೆ ನೀಡಿದ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಶೇಕಡಾ 40 ರಿಂದ 74 ರಷ್ಟು ಅಂಗವಿಕಲತೆಯಿರುವ ವಿಕಲಚೇತನರಿಗೆ ರೂ. 500 ಹಾಗೂ ಶೇಕಡಾ 75 ಕ್ಕಿಂತ ಅಂಗವಿಕಲತೆವುಳ್ಳ ವಿಕಲಚೇತನರಿಗೆ ರೂ. 1200 ಮಾಸಿಕ ಪಿಂಚಣಿಯನ್ನು ನೀಡಲಾಗುತ್ತಿದೆ. ಈ ಯೋಜನೆಯಡಿ ಅರ್ಹ ಫಲಾನುಭವಿಗಳಿಗೆ ಪಿಂಚಣಿ ಪಾವತಿಸಲು ವಾರ್ಷಿಕ ಸರಾಸರಿ 687 ಕೋಟಿ ರೂ. ಗಳು ವೆಚ್ಚವಾಗುತ್ತದೆ ಎಂದು ಸಚಿವರು ತಿಳಿಸಿದ್ದಾರೆ.

ಬಾಬು:ಜಿಪಿಆರ್.

## ಶ್ರೀರಂಗಪಟ್ಟಣ ಮಿನಿ ದಸರಾ: ಕೋರಿಕೆ ಮೇರೆಗೆ ಜಾಹೀರಾತು

ಬೆಂಗಳೂರು, ಜುಲೈ 15 (ಕರ್ನಾಟಕ ವಾರ್ತೆ)

ಮೈಸೂರು ದಸರಾ ಮಹೋತ್ಸವ ಸಂದರ್ಭದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆವತಿಯಿಂದ ಶ್ರೀರಂಗಪಟ್ಟಣದಲ್ಲಿ ನಡೆಯಲಿರುವ ಮಿನಿ ದಸರಾ ಮಹೋತ್ಸವದ ಪ್ರಚಾರಕ್ಕಾಗಿ ಉತ್ಸವ ಸಮಿತಿಯವರ ಕೋರಿಕೆ ಮೇರೆಗೆ ಪತ್ರಿಕೆಗಳಲ್ಲಿ ಜಾಹೀರಾತು ಪ್ರಕಟಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಇಂದು ವಿಧಾನಸಭೆಯಲ್ಲಿ ರಾಜ್ಯ ಮೂಲ ಸೌಲಭ್ಯ ಅಭಿವೃದ್ಧಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಹಾಗೂ ಹಜ್ ಖಾತೆ ಸಚಿವ ಆರ್. ರೋಷನ್ ಬೇಗ್ ಅವರು ಶ್ರೀರಂಗಪಟ್ಟಣ ಶಾಸಕ ಎ.ಬಿ. ರಮೇಶ್ ಬಂಡಿಸಿದ್ದೇಗೌಡ ಅವರ ಪ್ರಶ್ನೆಗೆ ನೀಡಿದ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆವತಿಯಿಂದ ಕಳೆದ ಎರಡು ವರ್ಷಗಳಲ್ಲಿ ಮಿನಿ ದಸರಾ ಪ್ರಚಾರಕ್ಕಾಗಿ ಕ್ರಮವಾಗಿ 2013–14 ರಲ್ಲಿ 1,30,400 ರೂ. ಗಳು ಹಾಗು 2014–15 ರಲ್ಲಿ ರೂ 52,800/– ಗಳನ್ನು ಖರ್ಚು ಮಾಡಲಾಗಿದೆ. ಪ್ರಸಕ್ತ ಸಾಲಿನಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ಶ್ರೀರಂಗಪಟ್ಟಣದ ಮಿನಿ ದಸರಾ ಮಹೋತ್ಸವಕ್ಕೆ ಯಾವುದೇ ಅನುದಾನವನ್ನು ಹಂಚಿಕೆ ಮಾಡಿರುವುದಿಲ್ಲ. ಶ್ರೀರಂಗಪಟ್ಟಣದ ಮಿನಿ ದಸರಾ ಸಮಿತಿಯವರು ಕೋರಿದಲ್ಲಿ ಜಾಹೀರಾತು ಹಾಗು ಫ್ಲೆಕ್ಸ್‌ಗಳ ಮೂಲಕ ಪ್ರಚಾರ ಕೈಗೊಳ್ಳಲಾಗುವುದು. ಪ್ರಚಾರ ನಡೆಸಲು ಯಾವುದೇ ಅಡೆತಡೆಗಳು ಇರುವುದಿಲ್ಲ.

ಬಾಬು:ಜಿಪಿಆರ್.

## ವಿವಿಧ ವಸತಿ ಯೋಜನೆಗಳಡಿ 6.19 ಲಕ್ಷ ಮನೆ ಪೂರ್ಣ

ಬೆಂಗಳೂರು, ಜುಲೈ 15 (ಕರ್ನಾಟಕ ವಾರ್ತೆ)

ರಾಜ್ಯದಲ್ಲಿ 2013–14 ಹಾಗೂ 2014–15 ನೇ ಆರ್ಥಿಕ ವರ್ಷದಲ್ಲಿ ವಿವಿಧ ವಸತಿ ಯೋಜನೆಗಳಡಿ 6,00,000 ಮನೆಗಳನ್ನು ನಿರ್ಮಿಸುವ ಗುರಿ ಇದ್ದು ಒಟ್ಟಾರೆ 6,19,645 ಮನೆಗಳನ್ನು ನಿರ್ಮಿಸಲಾಗಿದೆ ಎಂದು

ಇಂದು ವಿಧಾನಸಭೆಯಲ್ಲಿ ರಾಜ್ಯ ವಸತಿ ಖಾತೆ ಸಚಿವ ಡಾ. ಎಂ.ಹೆಚ್. ಅಂಬರೀಷ್ ಅವರು ಶಾಸಕ ಕೆ.ಜಿ. ಬೋಪಯ್ಯನವರ ಪ್ರಶ್ನೆಗೆ ನೀಡಿದ ಉತ್ತರದಲ್ಲಿ ತಿಳಿಸಿದರು.

2013–14 ನೇ ಸಾಲಿನಲ್ಲಿ ಮನೆ ನಿರ್ಮಾಣಕ್ಕಾಗಿ 2272.89 ಕೋಟಿ ರೂ. ಅನುದಾನ ಬಿಡುಗಡೆಯಾಗಿದ್ದು, 1993.02 ಕೋಟಿ ರೂ. ಗಳನ್ನು ವೆಚ್ಚಮಾಡಲಾಗಿದೆ. 2014–15 ನೇ ಸಾಲಿನಲ್ಲಿ ಮನೆ ನಿರ್ಮಾಣಕ್ಕಾಗಿ 2231.01 ಕೋಟಿ ರೂ. ಅನುದಾನ ಬಿಡುಗಡೆಯಾಗಿದ್ದು, 2609.01 ಕೋಟಿ ರೂ. ಗಳನ್ನು ವೆಚ್ಚ ಮಾಡಲಾಗಿದೆ. ಒಟ್ಟಾರೆ 2 ಆರ್ಥಿಕ ವರ್ಷಗಳಲ್ಲಿ 4503.90 ಕೋಟಿ ರೂ. ಗಳ ಅನುದಾನ ಬಿಡುಗಡೆಯಾಗಿದ್ದು, ಹಿಂದಿನ ವರ್ಷದ ಪ್ರಾರಂಭಿಕ ಶಿಲ್ಕು ಸೇರಿದಂತೆ 4602.03 ಕೋಟಿ ರೂ. ವೆಚ್ಚಮಾಡಲಾಗಿದೆ ಎಂದು ಸಚಿವರು ತಿಳಿಸಿದರು.

ಬಾಬು:ಜಿಪಿಆರ್.

## ಲಲಿತ ಮಹಲ್ ಗುತ್ತಿಗೆ ಷರತ್ತು ಉಲ್ಲಂಘನೆ ಪರಿಶೀಲನೆ

**ಬೆಂಗಳೂರು, ಜುಲೈ 15 (ಕರ್ನಾಟಕ ವಾರ್ತೆ)**

ಮೈಸೂರಿನಲ್ಲಿರುವ ಲಲಿತ ಮಹಲ್ ಅರಮನೆಯ ಮಾಲೀಕತ್ವವು ಕರ್ನಾಟಕ ಸರ್ಕಾರಕ್ಕೆ ಸೇರಿದೆ. ಇದನ್ನು ಗುತ್ತಿಗೆ ಆಧಾರದ ಮೇಲೆ ಐಟಿಡಿಸಿ ಯವರಿಗೆ 1973 ರಲ್ಲಿ 50 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿದೆ ಎಂದು ರಾಜ್ಯ ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವ ಶ್ರೀ ಆರ್. ವಿ. ದೇಶಪಾಂಡೆ ಅವರು ಚಾಮರಾಜ ಕ್ಷೇತ್ರದ ಶಾಸಕ ಶ್ರೀ ವಾಸು ಅವರ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಇಂದು ವಿಧಾನಸಭೆಯಲ್ಲಿ ತಿಳಿಸಿದರು.

ಮೈಸೂರಿನ ಲಲಿತ ಮಹಲ್ ಅರಮನೆಯು ಪಾರಂಪರಿಕ ಕಟ್ಟಡವಾಗಿದ್ದು, ಮೈಸೂರಿಗೆ ಪ್ರವಾಸಿಗರು ಹೇರಳವಾಗಿ ಭೇಟಿ ನೀಡುತ್ತಿದ್ದುದ್ದರಿಂದ ಅದನ್ನು ಮೊದಲನೇ ದರ್ಜೆಯ ಹೋಟೆಲ್ ಆಗಿ ಮಾರ್ಪಾಡು ಮಾಡುವಂತೆ ಅಥವಾ ಖಾಸಗಿ ಹೋಟೆಲ್‌ನವರಿಗೆ ಭೋಗ್ಯಕ್ಕೆ ನೀಡುವಂತೆ ಅನೇಕ ಪ್ರಸ್ತಾವನೆಗಳು ರಾಜ್ಯ ಸರ್ಕಾರಕ್ಕೆ ಬರುತ್ತಿದ್ದ ಹಿನ್ನೆಲೆಯಲ್ಲಿ ಸರ್ಕಾರವು ಭಾರತ ಪ್ರವಾಸೋದ್ಯಮ ಇಲಾಖೆಯೊಂದಿಗೆ ಸಮಾಲೋಚನೆ ನಡೆಸಿ ಐಟಿಡಿಸಿಯವರಿಗೆ ಗುತ್ತಿಗೆ ಆಧಾರದ ಮೇಲೆ ನಡೆಸಲು ಲಲಿತ ಮಹಲ್ ಅರಮನೆಯನ್ನು ನೀಡಲಾಗಿದೆ ಎಂದು ಸಚಿವರು ತಿಳಿಸಿದರು.

ಈ ಕಟ್ಟಡವನ್ನು ಭಾರತೀಯ ಪ್ರವಾಸೋದ್ಯಮ ನಿಗಮಕ್ಕೆ 50 ವರ್ಷಗಳ ಅವಧಿಗೆ ಗುತ್ತಿಗೆ ನೀಡಿರುವುದರಿಂದ ಕರಾರು ಮಾಡಿಕೊಂಡಿರುವ ಪ್ರಕಾರ ಗುತ್ತಿಗೆ ಅವಧಿ ಮುಕ್ತಾಯಗೊಳ್ಳುವವರಿಗೆ ಈ ಪರಂಪರ ಕಟ್ಟಡವನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳುವುದು ನಿಗಮದ ಜವಾಬ್ದಾರಿಯಾಗಿದೆ. ಈ ನಿಗಮಕ್ಕೆ ನೀಡಿರುವ ಗುತ್ತಿಗೆ ಅವಧಿಯು 2023 ಕ್ಕೆ ಮುಕ್ತಾಯಗೊಳ್ಳುವುದರಿಂದ ಅಲ್ಲಿಯವರಿಗೆ ಈ ಕಟ್ಟಡದ ಪರಂಪರಿಕ ಮೌಲ್ಯಕ್ಕೆ ಧಕ್ಕೆಬಾರದ ರೀತಿಯಲ್ಲಿ ನಿಗಮವೇ ಕ್ರಮ ವಹಿಸಬೇಕಾಗಿದೆ ಎಂದು ಸಚಿವ ದೇಶಪಾಂಡೆ ಅವರು ತಿಳಿಸಿದರು.

ಬಾಬು:ಜಿಪಿಆರ್.

## ರಾಜ್ಯದಲ್ಲಿ ಕಳೆದ ಐದು ವರ್ಷ 17.42 ಮನೆ ಮಂಜೂರು

**ಬೆಂಗಳೂರು, ಜುಲೈ 15 (ಕರ್ನಾಟಕ ವಾರ್ತೆ)**

ರಾಜ್ಯದಲ್ಲಿ 2010–11 ರಿಂದ 2014–15 ರವರೆಗೆ ವಿವಿಧ ಯೋಜನೆಗಳಡಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ಒಟ್ಟು 16,50,122 ಮನೆಗಳನ್ನು, ನಗರ ಪ್ರದೇಶದಲ್ಲಿ ಒಟ್ಟು 92,798 ಮನೆಗಳನ್ನು ಒಟ್ಟಾರೆ 17,42,920

ಮನೆಗಳನ್ನು ಮಂಜೂರು ಮಾಡಲಾಗಿದೆ ಎಂದು ರಾಜ್ಯ ವಸತಿ ಸಚಿವ  ಡಾ. ಎಂ.ಹೆಚ್. ಅಂಬರೀಷ್ ಅವರು ವಿಧಾನಸಭೆಯಲ್ಲಿ ಇಂದು ಶಾಸಕ ಕೆ.ಬಿ. ಕೋಳಿವಾಡ ಅವರ ಪ್ರಶ್ನೆಗೆ ಉತ್ತರಿಸುತ್ತಾ ತಿಳಿಸಿದರು.
ಬಾಬು:ಜಿಪಿಆರ್.

## Youth Workshop in Bengaluru – Auditions across Karnataka

## Bangalore, July 15 (Karnataka Information)

*The Attakkalari Centre for Movement Arts, Bengaluru with the support of Department of Youth Empowerment and Sports, Karnataka announces a week long Introductory Movement Workshop in Bengaluru. Auditions to select participants for the workshop will be conducted across Karnataka.*

**Bengaluru, India (July 13th , 2015) ---** Arts Education, particularly movement arts is the key to holistic development of young people as it nurtures creativity and helps to develop multiple intelligence of the individual. Dance and Movement Arts have a tremendous impact on the ability of the brain and the body to rewire itself opening up new channels and processes of learning, increasing the overall sense of awareness and co-ordination, thus helping to develop individuals who are creative yet disciplined, sensitive yet confident, independent yet team players and above all possessing a healthy body and mind.

As an organization that has meaningfully garnered knowledge and wisdom from our rich physical and performance traditions on one hand and the latest information and skills created elsewhere in the world on the other, Attakkalari Centre for Movement Arts is well placed to bring these vital components into educational settings whether in schools and colleges or community settings to provide holistic education for students ensuring their comprehensive and wholesome development.

This one week introductory workshop planned to be held in Bangalore (August, 2015) will give the young minds a skill development opportunity for those considering dance as a viable career. The participants of the workshop will get firsthand experience to interact with the dancers and the intense training that goes to make a performance. Thus, they can make an informed decision to consider pursuing dance as a profession.

It is a free workshop in Bangalore with accommodation and food expenses covered. Government might support talented candidates chosen from the workshop for further studies to help them pursue a career in Movement Arts. Participants for this workshop will be selected through auditions. Auditions will take place in five

regions throughout the state according to the following schedule. Participants are advised to wear t-shirt, track pants and socks for the auditions. Reporting time is 12.30 pm elsewhere and 3 pm in Bengaluru.

- 16th July, 2015 – 1 pm to 4 pm - Dr Chandrashekar Patil Indoor Stadium, **Kalaburagi (Gulbarga)**, Karnataka 585102.
- 17th July, 2015 - 1 pm to 4 pm - Rajya Sarkari Naukarara Bhavana, Near Town Hall, Hampanakatte, **Mangalore**, Karnataka 575001.
- 20th July, 2015 - 1 pm to 4 pm - R N Shetty Indoor Stadium, College Road, **Dharwad**, Karnataka - 580008.
- 21st July, 2015 - 3 pm to 6 pm – Yavanika auditorium, State Youth Centre, Nrupathunga Rd, Near Reserve Bank, **Bengaluru**, Karnataka - 560001
- 22nd July, 2015 - 1 pm to 4 pm - Chamundi Vihar Indoor Stadium, Nazarbad, **Mysuru**, Karnataka - 570010.

For any questions related to auditions, please contact +91 80 22123684 or projects@attakkalari.org. **Media Contact:** Rowshini Karunanithi | projects@attakkalari.org | + 91 80 2212 3684

babu/km

# ಉಚಿತ ಕಾರ್ಯಾಗಾರ

**ಬೆಂಗಳೂರು, ಜುಲೈ 15 (ಕರ್ನಾಟಕ ವಾರ್ತೆ)**

ಬೆಂಗಳೂರು (ಜುಲೈ ೭, ೨೦೧೫) – ಅಟ್ಟಕಲರಿ ಸೆಂಟರ್ ಫಾರ್ ಮೂವ್ಮೆಂಟ್ ಆರ್ಟ್ಸ್, ಬೆಂಗಳೂರು, ಇವರು ಕರ್ನಾಟಕ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯದೊಂದಿಗೆ, ಒಂದು ವಾರದ ಪರಿಚಯಿಕ ಚಲನ ಕಲೆಯ ಕಾರ್ಯಾಗಾರವನ್ನು ಬೆಂಗಳೂರಿನಲ್ಲಿ ಆಯೋಜಿಸಿದೆ. ಈ ಕಾರ್ಯಾಗಾರದಲ್ಲಿ ಭಾಗವಹಿಸುವವರನ್ನು ರಾಜ್ಯದಾದ್ಯಂತ ನಡೆಸುವ ಆಯ್ಕೆ ಪ್ರಕ್ರಿಯೆಯ ಮುಖಾಂತರ ಆರಿಸಿಕೊಳ್ಳಲಾಗುವುದು.

ಕಲಾ ಶಿಕ್ಷಣ, ಅದರಲ್ಲೂ ಚಲನ ಕಲೆಯು ಯುವಕರ ಸಮಗ್ರ ಬೆಳವಣಿಗೆಗೆ ಕಾರಣವಾಗಿದ್ದು, ಕ್ರಿಯಾಶೀಲರನ್ನಾಗಿಸುತ್ತದೆ.ಈ ಒಂದು ಕಾರ್ಯಾಗಾರವು, ಯುವಕರಲ್ಲಿ ಕೌಶಲ್ಯತೆಯನ್ನು ವೃದ್ಧಿಸಿ ನೃತ್ಯವನ್ನು ವೃತ್ತಿಯನ್ನಾಗಿಸಿಕೊಳ್ಳಲು ಅವಕಾಶ ಕಲ್ಪಿಸುತ್ತದೆ. ಈ ಉಚಿತ ಕಾರ್ಯಾಗಾರವು,

ಶಿಬಿರಾರ್ಥಿಗಳಿಗೆ ಆಹಾರ ಮತ್ತು ವಸತಿ ಸೌಕರ್ಯಗಳು ಒದಗಿಸಲಾಗುವುದು. ಶಿಬಿರಾರ್ಥಿಗಳು ಸಮರ್ಥ ವೃತ್ತಿಪರ ನೃತ್ಯಪಟುಗಳೊಂದಿಗೆ ಸಂವಹಿಸಿ, ಭೇಟಿ ಮಾಡಿ, ಒಂದು ಪ್ರದರ್ಶನಕ್ಕೆ ಬೇಕಾಗುವ ನೃತ್ಯ ತಾಲೀಮಿನ ಬಗ್ಗೆ ತಿಳಿದುಕೊಳ್ಳಬಹುದು. ತನ್ಮೂಲಕ ಅವರು ನೃತ್ಯವನ್ನು ವೃತ್ತಿಯನ್ನಾಗಿ ಸ್ವೀಕರಿಸುವ ಬಗ್ಗೆ ನಿರ್ಧಾರ ತೆಗೆದುಕೊಳ್ಳುವುದಕ್ಕೆ ಸಹಾಯ ಆಗುವುದು.

ಕಾರ್ಯಾಗಾರದಲ್ಲಿಗುರುತಿಸಲಾದ ಪ್ರತಿಭಾಶಾಲಿಗಳಿಗೆ, ಸರ್ಕಾರವು, ಚಲನ ಕಲೆ ಶಿಕ್ಷಣವನ್ನು ಇನ್ನೂ ಹೆಚ್ಚು ಅಭ್ಯಸಿಸಲು ಸಹಾಯ ಮಾಡಬಹುದು. ಈ ಕಾರ್ಯಾಗಾರದಲ್ಲಿ ಭಾಗವಹಿಸುವವರನ್ನು ಆಡಿಷನ್ಸ್ ಮೂಲಕ ಆಯ್ಕೆ ಮಾಡಲಾಗುವುದು. ಆಯ್ಕೆಯು ರಾಜ್ಯದ ಐದು ಭಾಗಗಳಲ್ಲಿ ಈ ಕೆಳಗಿನ ವೇಳಾಪಟ್ಟಿಗಳಲ್ಲಿ ನಡೆಸಲಾಗುವುದು. ಪಾಲ್ಗೊಳ್ಳಲುವ ಅಭ್ಯರ್ಥಿಗಳು ಆ ದಿನ ಟಿ-ಶರ್ಟ್, ಟ್ರಾಕ್ ಪ್ಯಾಂಟ್ ಹಾಗೂ ಸಾಕ್ಸನ್ನು (ಕಾಲ್ಚೀಲ) ಹಾಕಿಕೊಂಡು ಬರುವುದು.

- **16th July, 2015 - 1 pm to 4 pm - Dr Chandrashekar Patil Indoor Stadium, Kalaburagi (Gulbarga), Karnataka - 585102.**
- **17th July, 2015 - 1 pm to 4 pm - Rajya Sarkari Naukarara Bhavana, Near Town Hall, Hampanakatte, Mangalore, Karnataka - 575001.**
- **20th July, 2015 - 1 pm to 4 pm - R N Shetty Indoor Stadium, College Road, Dharwad, Karnataka - 580008.**
- **21st July, 2015 - 3 pm to 6 pm – Yavanika auditorium, State Youth Centre, Nrupathunga Rd, Near Reserve Bank, Bengaluru, Karnataka - 560001**
- **22nd July, 2015 - 1 pm to 4 pm - Chamundi Vihar Indoor Stadium, Nazarbad, Mysuru, Karnataka - 570010.**

ಆಡಿಷನ್ಸ್ ಗೆ ಸಂಬಂಧಿಸಿದ ಯಾವುದೇ ಪ್ರಶ್ನೆಗಳಿಗೆ +91 80 22123684 ಕರೆ ಮಾಡ ಬಹುದು ಅಥವಾ **projects@attakkalari.org**. ಈ ಮೇಲ್ ಮೂಲಕ ವಿಚಾರಿಸಬಹುದು.

ಮೀಡಿಯಾ ಸಂಪರ್ಕ – **Rowshini Karunanithi | projects@attakkalari.org | + 91 80 2212 3684**

**babu/km**